**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ನೀಲೇಶ್ ಕುಮಾರ್ | **ಪಿಡಬ್ಲ್ಯೂ.12** |
| **ತಂದೆಯ ಹೆಸರು** | : | ಪ್ರಮೋದ್ ಕುಮಾರ್ | **ಸಿಡಬ್ಲ್ಯೂ.27** |
| **ವಯಸ್ಸು** | : | **28 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿ.ಪಿ. ಬಡಾವಣೆ, ಚಿತ್ರದುರ್ಗ | **ದಿನಾಂಕ: 11.10.2018** |
| **ವಾಸಸ್ಥಳ** | : | ಚಿತ್ರದುರ್ಗ. | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

2015 ರಲ್ಲಿ ನಾನು ಚಿತ್ರದುರ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಜೆ.ಸಿ.ಆರ್. ಶಾಖೆಯಲ್ಲಿ ಸಹಾಯಕ ವ್ಯವಸ್ಥಾಪಕರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಬ್ಯಾಂಕ್ ಈಗ ಎಸ್.ಬಿ.ಐ. ನಲ್ಲಿ ವಿಲೀನವಾಗಿರುತ್ತದೆ. ಪಿಡಬ್ಲ್ಯೂ-11 ಮಾಲತಿ, ಮ್ಯಾನೇಜರ್ ನನಗೆ ಗೊತ್ತು. ಆ ಸಮಯದಲ್ಲಿ ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ನಮ್ಮ ಎಸ್.ಬಿ.ಎಂ. ಕಛೇರಿಗೆ ಪತ್ರ ಬರೆದು ಎಸ್.ಬಿ. ಅಕೌಂಟ್ ನಂ. 54036229074 ಹಾಗೂ 64020235013 ಇವು ಯಾರ ಹೆಸರಿನಲ್ಲಿರುತ್ತವೆ ಅಂತ ಮಾಹಿತಿ ಕೇಳಿದ್ದರು. ಆ ಪ್ರಕಾರ ನಮ್ಮ ಬ್ಯಾಂಕ್ ನಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಅಕೌಂಟ್ ನಂ. 54036229074 ಇದು ಆರೋಪಿ-1 ರಾಜಣ್ಣ ಹೆಸರಿನಲ್ಲಿದೆ ಅಂತ ಹೇಳಿರುತ್ತೇನೆ. ಅದೇ ರೀತಿ ಎಸ್.ಬಿ. ಅಕೌಂಟ್ ನಂ. 64020235013 ಇದು ಆರೋಪಿ-2 ರಾಜೇಶ್ವರಿ.ಬಿ.ಎಸ್. ಇವರ ಹೆಸರಿನಲ್ಲಿರುತ್ತದೆ ಅಂತ ದಿ: 20.01.2016 ರಂದು ವರದಿ ಕೊಟ್ಟಿರುತ್ತೇನೆ. ಅದನ್ನು ನಿಪಿ-18 ಅಂತ ಗುರುತಿಸಲಾಯಿತು.

**ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

**ಶ್ರೀ ಎಸ್. ಹೆಗಡೆ ವಕೀಲರು ಪಾಟೀ ಸವಾಲು ಇಲ್ಲ ಅಂತ ಹೇಳಿರುತ್ತಾರೆ .**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.